ಋ) ಮೈಸೂರು ಕೃಷಿ ಮಾರುಕಟ್ಟೆಯಲ್ಲಿ ಅಧಿಕಾರಿಗಳು ಶಾಸಕರಿಗೆ ಅವಮಾನವಾಗುವಂತೆ ನಡೆದುಕೊಂಡಿರುವುದು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರವಾದಂತ ಪ್ರಶ್ನೆಯಾಗಿದೆ. ಇದು ಅಧಿಕಾರಿಗಳಿಂದ ಶಾಸಕರಿಗೆ ಅಪಮಾನ ಮಾಡಿರುವ ಕೆಲಸ ಕೃಷಿ ಮಾರುಕಟ್ಟೆಯಲ್ಲಿ ನಡೆದಿದೆ. ಮಾನ್ಯ ಸಚಿವರಾದ ನಾಗಪ್ಪನವರಿಗೂ ಇದು ಗೊತ್ತು. ಸಿದ್ದರಾಮಯ್ಯನವರ ಕೃಪಾಪೋಶಿತ ನಾಟಕ ಮಂಡಳಿ ಅಲ್ಲಿ ಸೇರಿಕೊಂಡು ಇವತ್ತು ತಿಮಿಂಗಲಗಳಾಗಿ ಎ.ಪಿ.ಎಂ.ಸಿ.ಯಲ್ಲಿ ಅವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಸತೀಶ್‌ಕುಮಾರ ಮತ್ತು ಮಹದೇವಪ್ಪ, ಸಣ್ಣೇಗೌಡ, ಕಳಸೇಗೌಡ ಎನ್ನತಕ್ಕ ನಾಲ್ಕು ಜನ ಕಳ್ಳರು ಅಲ್ಲಿ ಗೋದಾಮುಗಳನ್ನು ಕೊಡಲು ಐವತ್ತು ಸಾವಿರ ರೂಪಾಯಿ ಲಂಚ ಕೇಳಿದ್ದಾರೆ. ವರ್ಗವಾಗಿರತಕ್ಕ ಅಧಿಕಾರಿಗಳನ್ನು ವರ್ಗ ಮಾಡಬೇಡಿಯೆಂದು ಸಿದ್ದರಾಮಯ್ಯನವರು ತಮ್ಮ ಕೋಮಿನವರು ಎಂದು ಗಣನೆಗೆ ತೆಗೆದುಕೊಂಡು ಮಾಡಿರತಕ್ಕದ್ದು ಹೇಯಕೃತ್ಯ. ಜಾತಿಯಲ್ಲ ಇಲ್ಲಿ, ನೀತಿ ಇರಬೇಕು. ನೀತಿಯನ್ನು ಪಾಲಿಸಬೇಕಾಗಿರುತ್ತದೆ. ನಾಗಪ್ಪನವರು ಹೆಸರಿಗೆ ನಾಗಪ್ಪ. ಬುಸುಗುಟ್ಟುವುದೂ ಇಲ್ಲ ಕಚ್ಚುವುದೂ ಇಲ್ಲ. ಅವರುಗಳು ಸಂಪೂರ್ಣವಾಗಿ ಸಿದ್ದರಾಮಯ್ಯನವರು ಸ್ವಾಮ್ಯಕ್ಕೆ ಒಳಗಾಗಿದ್ದಾರೆ. ಒಬ್ಬ ಶಾಸಕರಿಗೆ ಅವಮಾನವನ್ನು ಮಾಡಿದಂಥ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಈ ಸದನದ ಇನ್ನೂರು ಜನ ಶಾಸಕರಿಗೆ ಅವಮಾನವಾದಂತೆ. ಅವರು ಅವಾಚ್ಯ ಶಬ್ದ ಮಾತನಾಡಿದಾಗ ನೀವು ಐದು ವರ್ಷ ಇರುತ್ತೀರಿ ನಾವು 35 ವರ್ಷ ಇರುತ್ತೇವೆ ಎಂದು ಹೇಳಿದಾಗ ನಾನು ಹೇಳಿದ್ದೇನೆ, ನೀವು 35 ವರ್ಷವೂ ಬರುವ ಎಲ್ಲರಿಗೂ ಕೈಮುಗಿದುಕೊಂಡು ಇರಬೇಕು ಆದ್ದರಿಂದ ಸರಿಯಾದ ರೀತಿಯಲ್ಲಿ ವರ್ತಿಸಬೇಕೆಂದು ಹೇಳಿದ್ದೇನೆ. ಆ ಎಪಿಎಂಸಿಯಲ್ಲಿ 48 ಗೋದಾಮುಗಳಿದ್ದು ಎರಡು ವರ್ಷಗಳಿಂದ ಅದನ್ನು ವಿಲೇವಾರಿ ಮಾಡದೆ ಸರ್ಕಾರದ ಬೊಕ್ಕಸಕ್ಕೆ 5 ಲಕ್ಷಕ್ಕೂ ಹೆಚ್ಚು ಹಣ ಹಾಳಾಗಿರುತ್ತದೆ. ಇದನ್ನು ತುಂಬುವವರು ಯಾರು? ಅಲ್ಲಿ ಈಗ ಒಂದು ವರ್ಗದ ನಾಲ್ಕು ಜನ ಸೇರಿಕೊಂಡು ತಿಮಂಗಿಲಗಳಾಗಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಮೈಸೂರು ವಿಭಾಗಾಧಿಕಾರಿಗಳ ಪತ್ರಾಂಕಿತ ಅಧಿಕಾರಿ ಡಾ: ಬೊರೇಗೌಡರಿಗೆ ವಿಚಾರಣೆಗಾಗಿ ಹಾಕಿದರು, ಆ ವಿಚಾರಣೆಯಲ್ಲಿ ಅಧಿಕಾರಿಗಳು ಸಂಪೂರ್ಣವಾಗಿ ತಪ್ಪು ಮಾಡಿದ್ದಾರೆ ಅನುಚಿತವಾಗಿ ವರ್ತಿಸಿದ್ದಾರೆ ಎಂಬ ವರದಿ ಸಹ ಇದ್ದಾಗ್ಯೂ ಅದರ ಮೇಲೆ ನಾಗಪ್ಪನವರು ಕ್ರಮ ತೆಗೆದುಕೊಳ್ಳುತ್ತೇನೆಂದು ನನಗೆ ಭರವಸೆ ಕೊಟ್ಟು ಆ ಮಹಾದೇವಪ್ಪ ಎನ್ನುವವನನ್ನು ವರ್ಗ ಮಾಡಿದ್ದು ಸತೀಶ್‌ಕುಮಾರ್ ಎಂಬುವನನ್ನು ನಿಧಾನವಾಗಿ ವರ್ಗ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟು, ಅದು ಆಶ್ವಾಸನೆಯಾಗೇ ಉಳಿಯಲು ಕಾರಣವೇನು? ಇದರಲ್ಲಿ ಜಾತಿಯ ಬೀಜವನ್ನು ಬಿತ್ತಿದ್ದಾರಾ ಅಥವಾ ಸಿದ್ದರಾಮಯ್ಯನವರು ಸಂಪೂರ್ಣವಾಗಿ ಕರ್ನಾಟಕದ ಎಲ್ಲಾ

ಕುರುಬ ಜನಾಂಗದ ಮಂತ್ರೀನಾ? ಎಲ್ಲಾ ವರ್ಗದ ಮಂತ್ರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಶೂನ್ಯವೇಳೆಯಲ್ಲಿ ಯಾರೊಬ್ಬರ ಬಗ್ಗೆ ಮಾತನಾಡಲು ಅವರು ಉಪಯೋಗಿಸಿಕೊಳ್ಳುವುದು ಸರಿಯಲ್ಲ. ಘಟನೆ ಬಗ್ಗೆ ಅವರು ಹೇಳಲಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ನಾಲ್ಕೂ ಜನ ಒಂದೇ ವರ್ಗವಿದ್ದರೂ ಏಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ?

ಉಪಾಧ್ಯಕ್ಷರು: ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ, ದಯಮಾಡಿ ಕುಳಿತುಕೊಳ್ಳಿ ಶಂಕರಲಿಂಗೇಗೌಡರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಆ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕು, ಶಾಸಕನಾದ ನನಗೆ ಆದ ಅವಮಾನವಲ್ಲ, ಮಂತ್ರಿಗಳಾದ ನಿಮಗೂ ಆದದ್ದು.

ಶ್ರೀ ಹೆಚ್.ನಾಗಪ್ಪ: ಶಾಸಕರು 4-4-97ರಂದು ಕೃಷಿ ಮಾರುಕಟ್ಟೆಗೆ ಭೇಟಿ ಮಾಡಿದ್ದಾರೆ. ಅಲ್ಲಿ ಅಧಿಕಾರಿಗಳಿಗೂ ಅವರಿಗೂ ಸ್ವಲ್ಪ ಮಾತುಕತೆ ನಡೆದಿದೆ. ಅದರ ಬಗ್ಗೆ ಅವರೊಂದು ದೂರನ್ನು ಕೂಡ ಕೊಟ್ಟಿದ್ದಾರೆ. ಅದರ ಮೇಲೆ ಬೋರೇಗೌಡ ಎಂಬುವರಿಂದ ವಿಚಾರಣೆ ಕೂಡ ನಡೆದಿದೆ ಅದರಲ್ಲಿ ಮೇಲ್ನೋಟಕ್ಕೆ ಅಧಿಕಾರಿಗಳ ವರ್ತನೆ ಸರಿಯಾಗಿಲ್ಲವೆಂದು ಕಂಡುಬಂದಿದೆ. ಅದರ ಮೇಲೆ ಈಗಾಗಲೇ ಒಬ್ಬರನ್ನು ವರ್ಗಾವಣೆ ಮಾಡಿದೆ ಇನ್ನೊಬ್ಬರಿಗೆ ಷೋಕಾಸ್ ನೋಟಿಸ್ ಕೊಟ್ಟಿದೆ. ಅದಕ್ಕೆ ರಿಪ್ಲೈ ಬಂದ ಮೇಲೆ ಏನು ಕ್ರಮ ಬೇಕೋ ತೆಗೆದುಕೊಳ್ಳುತ್ತೇನೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರವರಿಂದ ಧರಣಿ)

(ಗೊಂದಲ)

ಉಪಾಧ್ಯಕ್ಷರು: ಏಕೆ ಈ ರೀತಿ ವೀರಾವೇಶ ಮಾಡುವುದು, ಯಾರ ಮೇಲೆ ಮಾಡುವುದು?

ಶ್ರೀ ಎಂ.ಪಿ.ಪ್ರಕಾಶ್: ನಿಮಗೆ ಆದ ಅವಮಾನ ಎಲ್ಲಾ ಶಾಸಕರಿಗೂ ಆದ ಅವಮಾನವೇ. ಯಾರಿಗಾದರೂ ಒಬ್ಬ ಅಧಿಕಾರಿ ಉದ್ಧಟತದಿಂದ ವರ್ತಿಸಿದರೆ ಸರ್ಕಾರ ಅದನ್ನು ಸಹಿಸುವುದಿಲ್ಲ. ಜನಪ್ರತಿನಿಧಿಗಳು ಎಷ್ಟೇ ದೊಡ್ಡವರಿರಲಿ ಎಷ್ಟೇ ಸಣ್ಣವರಿರಲಿ ಅವರನ್ನು ಗೌರವದಿಂದ ಕಾಣಬೇಕಾದ್ದು ನೀತಿ ನಿಯಮಾವಳಿಗಳೂ ಕೂಡ. ಆ ದೃಷ್ಟಿಯಿಂದ ನಾವು ಯಾವ ಅಧಿಕಾರಿಯನ್ನೂ ರಕ್ಷಣೆ ಮಾಡಲು ತಯಾರಿಲ್ಲ. ಮಾನ್ಯ

ಸಚಿವರು ಈ ವಿಚಾರದಲ್ಲಿ ಉತ್ತರ ಕೊಡುತ್ತಿದ್ದಾರೆ. ದಯವಿಟ್ಟು ತಾವು ಭಾವೋದ್ರೇಕಕ್ಕೆ ಒಳಗಾಗದೆ ವಿಷಯವನ್ನು ತಿಳಿದುಕೊಂಡು ನಂತರ ಮಾಡಿ

(ಗೊಂದಲ)

ಬಸವರಾಜು ಸದಸ್ಯರು ಒಂದು ವಿಚಾರ ಬಿಟ್ಟು ಹತ್ತು ವಿಚಾರದಲ್ಲಿ ದೊಡ್ಡ ಗಂಟಲಿದೆ ಎಂದು ಪ್ರಸ್ತಾಪ ಮಾಡುತ್ತಾರೆ. ಈ ತರಹದ ಮಾತುಕತೆಗಳನ್ನು ನೀವು ಮಾಡಬೇಡಿ. It is not a shouting match which is going on here. It is a matter where we have to conduct according to rules. ನೀವು ಇಲ್ಲಿ ಹೋರಾಟ ಮಾಡುವುದಕ್ಕೆ ಬಂದಿಲ್ಲ.

ಉಪಾಧ್ಯಕ್ಷರು: ನಿಯಮದ ಪ್ರಕಾರ ನೀವು ಪ್ರಸ್ತಾಪ ಮಾಡಬೇಕು. ಅದು ಬಿಟ್ಟು ಎಲ್ಲರೂ ಎದ್ದು ನಿಲ್ಲುವುದು ಸರಿಯೇ? ಸರಿಯಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರ ಆತಂಕ ಇಷ್ಟೇ. ಶಂಕರಲಿಂಗೇಗೌಡರು ಅಲ್ಲಿ ಹೋದಾಗ ಸೆಕ್ರೆಟರಿ ಮತ್ತು ಸೂಪರ್‌ವೈಸರ್‌ಗಳು ಮಿಸ್‌ಬಿಹೇವ್ ಮಾಡಿ ಗೊಡೌನ್‌ಗಳನ್ನು ಅಲಾಟ್‌ಮೆಂಟ್ ಮಾಡುವುದರ ಬಗ್ಗೆ ವ್ಯತ್ಯಾಸ ಆಗುತ್ತಿತ್ತು ಲಂಚ ತೆಗೆದುಕೊಂಡು ಅಲಾಟ್ ಮಾಡುತ್ತಿದ್ದಾರೆ ಎಂಬ ದೂರು ಕೇಳಿದ ಮೇಲೆ ಇವರು ಅಲ್ಲಿ ಹೋಗಿ ಇದು ಸರಿಯಿಲ್ಲ ಎಂದು ಕೇಳುವಾಗ ಇವರಿಗೇ ಅವಾಚ್ಯ ಶಬ್ದಗಳಿಂದ ಬೈದು ಅಂದು ಅವಮಾನ ಮಾಡಿ ಕಳುಹಿಸಿದ್ದಕ್ಕಾಗಿ ನೋವಾಗಿ ಇವತ್ತು ಇಲ್ಲಿ ಬಂದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಯಾರು ತಪ್ಪು ಮಾಡಿದ್ದಾರೆ ಅವರನ್ನು ಪುನಃ ಅಲ್ಲೇ ಇಡಬಾರದು. ಅದನ್ನು ಯಾರೂ ಸೈರಿಸುವುದಿಲ್ಲ ಅದೇ ಒಂದು ಪ್ರಿಸ್ಟೀಜ್ ಇಷ್ಯೂ ಆಗುತ್ತದೆ.

ಉಪಾಧ್ಯಕ್ಷರು: ಶಂಕರಲಿಂಗೇಗೌಡರೇ, ನಿಮ್ಮ ಜಾಗಕ್ಕೆ ನೀವು ಹೋಗಿ.

ಶ್ರೀ ಬಿ.ಬಿ.ಶಿವಪ್ಪ: ವಿಷಯ ಶಂಕರಲಿಂಗೇಗೌಡರು ಪ್ರಸ್ತಾಪ ಮಾಡಿರುವುದು ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ನಡೆಯುತ್ತಿದೆ. ಅಧಿಕಾರಿಗಳ ಬಗ್ಗೆ ಮಾತನಾಡುವುದು ಎನ್ನುವ ವಿಚಾರ ಅಲ್ಲ ಅಧಿಕಾರಿಗಳನ್ನು ಆ ವರ್ತನೆಗೆ ಇಳಿಸಿದ ಒಂದು ವ್ಯವಸ್ಥೆ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಇಲ್ಲಿ ಮಾರ್ಗದರ್ಶನ ಮಾಡಿದರು ಸಭೆಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ಅದನ್ನು ಅರ್ಥ ಮಾಡಿಕೊಂಡು ಬಂದಿದ್ದೇವೆ ನಾವು. ಬಾಯಿ ಎಷ್ಟೇ ಜೋರಾದರೂ ಈ ಸರ್ಕಾರಕ್ಕೆ ಕಿವಿ ಕೇಳುತ್ತಿಲ್ಲ. ಇವತ್ತು ಶಾಸಕರಾಗಿರುವ ನಾವು ಎಲ್ಲವನ್ನೂ ಕಳೆದುಕೊಂಡು ತಲೆತಗ್ಗಿಸಿ ನಿಶಬ್ದವಾಗಿ ಕೆಲಸ ಮಾಡುತ್ತಿದ್ದೇವೆ. ಶಾಸಕನಾಗದಿದ್ದರೂ ಮಾನ್ಯ ಹನುಮಂತಯ್ಯನವರ ಕಾಲದಿಂದಲೂ

ವಿಧಾನಸೌಧದ ಮೆಟ್ಟಲು ಹತ್ತಿದವನು. ಈ ತರಹದ ಅಧಿಕಾರ ನಡೆಸಿದ ಮಂತ್ರಿಗಳನ್ನು ನಾನು ನೋಡಲಿಲ್ಲ. ಈ ತರಹದ ಸರ್ಕಾರವನ್ನೂ ನಾನು ನೋಡಲಿಲ್ಲ. ಸರಿಯಾದ ಮಾರ್ಗದರ್ಶನ ಅಧಿಕಾರಿಗಳಿಗೆ ನೀಡಿ ಇವತ್ತು ನಮ್ಮ ಜಿಲ್ಲೆಯಲ್ಲಿ ಒಬ್ಬ ಸಾಮಾನ್ಯ ಜನತಾದಳದ ಕಾರ್ಯಕರ್ತ ಲಿಸ್ಟ್ ಮಾಡುತ್ತಾನೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೇಳಿದ್ದಾರೆ ಯಾವ್ಯಾವ ಇಲಾಖೆಯಲ್ಲಿ ಯಾರ್ಯಾರನ್ನು ವರ್ಗಮಾಡಬೇಕು ಎಂದು ಪಟ್ಟಿ ಕೊಡಿ ಎಂದು. ಯಾರು ಅಧಿಕಾರ ಕೊಟ್ಟವರು ಅವನಿಗೆ? ಅಧಿಕಾರಿಗಳು ಅವನಿಗೆ ಪಟ್ಟಿ ಕೊಡುತ್ತಾರೆ. ಇಲ್ಲದಿದ್ದರೆ ನನ್ನನ್ನೇನಾದರೂ ವರ್ಗ ಮಾಡಿಯಾರು? ನನ್ನ ತಪ್ಪನ್ನು ಎತ್ತಿಹಾಕಿಯಾರು ಎಂದು ಸರಿಯಾದ ವ್ಯವಸ್ಥೆ ಆಡಳಿತದಲ್ಲಿ ಇವರು ತರಲಿಲ್ಲ ಅಂದರೆ ನಾವು ಕೂಗುವುದೇ ಸದನದೊಳಗೆ. ಕೂಗದಿದ್ದರೆ ಆಗುವುದಿಲ್ಲ.

3.50 ಪಿ.ಎಂ

ಶ್ರೀ ಎಂ.ಪಿ.ಪ್ರಕಾಶ್: ನಮಗೆ ಗೌರವ ಇದೆ. ಎಲ್ಲಾ ಮಂತ್ರಿಗಳಿಗೂ ಹಾಗೂ ಸರ್ಕಾರಕ್ಕೂ ಜನರಲೈಸ್ ಮಾಡುವುದು ಸರಿ ಅಲ್ಲ. ದಯಮಾಡಿ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸ್ಪಸಿಫಿಕ್ ಆಗಿ....

(ಗೊಂದಲ)

ಒಂದು ನಿಮಿಷ, ಶಾಸಕರಿಗೆ ಗೌರವ ಕೊಡುವುದು ನಮ್ಮ ಜವಾಬ್ದಾರಿ. ಜಿಲ್ಲೆಯಲ್ಲಿ ಕೊಡಬೇಕಾಗುತ್ತದೆ, ನಿಮ್ಮ ಕ್ಷೇತ್ರದಲ್ಲಿ ಕೊಡಬೇಕಾಗುತ್ತದೆ, ಇಲಾಖೆಗೆ ಬಂದಾಗಲೂ ಕೊಡಬೇಕಾಗುತ್ತದೆ. ಅದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ. ಹಾಗೆ ಒಂದು ವೇಳೆ ಏನಾದರೂ ಕರ್ತವ್ಯ ಚ್ಯುತಿ ಆದರೆ ದಯಮಾಡಿ ಸ್ಪೆಸಿಫಿಕ್ ಆಗಿ ಇಡಿ. ಶಂಕರೇಗೌಡರು ಹೇಳಿದರು ನಮಗೆ ಅನ್ಯಾಯ ಆಗಿದೆ ಎಂದು... ಖಂಡಿತವಾಗಿ....

ಉಪಾಧ್ಯಕ್ಷರು: ಅವರು ಉತ್ತರ ಕೊಡುತ್ತಾ ಇದ್ದಾರೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ದಯಮಾಡಿ ನೀವು ಸ್ಪಷ್ಟವಾಗಿ ಹೇಳಿದರೆ ಒಳ್ಳೆಯದು, ಜನರಲೈಸ್ ಮಾಡಬೇಡಿ ನೀವು...

ಶ್ರೀ ಬಿ.ಬಿ.ಶಿವಪ್ಪ: ಹಿರಿಯ ಮಂತ್ರಿಗಳು ತಾವು ಇದ್ದೀರಿ, ನಿಮಗಲ್ಲದೆ ನಾವು ಮತ್ಯಾರಿಗೆ ಹೇಳಬೇಕು ಹೇಳಿ? ನಿಮ್ಮ ಇಲಾಖೆಯಲ್ಲಿ ಏನಾದರೂ ವ್ಯತ್ಯಾಸ ಆದರೆ ನಿಮಗೆ ತಾನೇ ಹೇಳಬೆಕು? ನೀವು ಕ್ರಮ ತೆಗೆದುಕೊಳ್ಳಬೇಕು ತಾನೇ? ನೀವು ಕ್ರಮ ತೆಗೆದುಕೊಳ್ಳದೆ ಇದ್ದರೆ ಮುಖ್ಯ ಮಂತ್ರಿಗಳಿಗೆ ಹೇಳಬೇಕು, ಮುಖ್ಯಮಂತ್ರಿಗಳೂ ಕ್ರಮ ತೆಗೆದುಕೊಳ್ಳದೆ ಹೋದರೆ ನಾವು ಇನ್ನು ಯಾರಿಗೆ ಹೇಳಬೇಕು?

ಉಪಾಧ್ಯಕ್ಷರು: ಶಿವಪ್ಪನವರೇ, ಈಗಾಗಲೇ ಗ್ರಾಮೀಣ ಅಭಿವೃದ್ಧಿ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಯಾರೇ ಇರಲಿ, ಯಾವುದೇ ಅಧಿಕಾರಿ ಇರಲಿ, ಅವರು ಸರ್ಕಾರದ ನಿಯಮದ ಪ್ರಕಾರ ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯವರೆವಿಗೂ ಏನೇನೂ ಕ್ರಮ ಆಗಿಲ್ಲ, ಆಗುವುದೂ ಇಲ್ಲ. ಅವರ ಕೈಯಲ್ಲಿ ಆಗುವುದೂ ಇಲ್ಲ. ನಾನೂ ಏನು ಹೇಳುತ್ತಾ ಇದ್ದೇನೆ ಎಂದರೆ ಅಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ. ಇದು ನಮ್ಮ ಅನುಭವದ ಮಾತನ್ನು ಹೇಳುತ್ತಿದ್ದೇನೆ. ನಾವು ಯಾರ ಮೇಲೂ ದ್ವೇಷ ಇಟ್ಟುಕೊಂಡು ಹೇಳುತ್ತಾ ಇಲ್ಲ. ಇದು ನಮ್ಮ ಅನುಭವದ ಮಾತು. ಅವರಿಗೆ ಮಾಡುವುದಕ್ಕೆ ಬಿಡುವುದಿಲ್ಲ. ಈ ದಿವಸ ಮಾನ್ಯ ಶ್ರೀ ದೇಶ್‌ಪಾಂಡೆ ಅವರು ಹೇಳಿದರು, ಎಲ್ಲಾ ಮಂತ್ರಿಗಳನ್ನು ಸೇರಿಸಬೇಡಿ ಎಂದು. ನಾನು ಎಲ್ಲರನ್ನೂ ಸೇರಿಸಿ ಹೇಳಲಿಲ್ಲ, ಯಾವ ಮಂತ್ರಿ ಇದ್ದಾರೆ ಅದನ್ನು ನೀವೇ ಅರ್ಥಮಾಡಿಕೊಳ್ಳಿ. ನಾನು ಏಕೆ ಎಲ್ಲಾ ಮಂತ್ರಿಗಳನ್ನು ಸೇರಿಸಿ ಹೇಳಲಿ? ಇದೂವರೆಗೂ ನಾನು ಯಾವುದೇ ವಿಚಾರಕ್ಕಾಗಿ ನಿಮ್ಮ ಹತ್ತಿರ ಬರಲಿಲ್ಲ. ಹಾಗಿದ್ದಮೇಲೆ ದೇಶಪಾಂಡೆ ಅವರನ್ನು ಏಕೆ ಸೇರಿಸಿಕೊಳ್ಳಲಿ? ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ಗಮನ ಹರಿಸುತ್ತಾರೆ. ಮಂತ್ರಿಯವರು ಗಮನ ಹರಿಸದೇ ಹೋದರೆ, ಮುಖ್ಯ ಮಂತ್ರಿಯವರು ಗಮನ ಹರಿಸುತ್ತಾರೆ. ಮುಖ್ಯ ಮಂತ್ರಿಗಳು ಗಮನ ಹರಿಸದೆ ಹೋದರೆ ಸದನ ಬರುವವರೆವಿಗೂ ಕಾಯಬೇಕು. ಅದು ಬಂದಮೇಲೆ ಮಾತನಾಡಬೇಕು.

ಉಪಾಧ್ಯಕ್ಷರು: ಮಂಜುನಾಥ್ ಅವರೇ ತಾವು ಈಗ ಕುಳಿತುಕೊಳ್ಳಿ, ನಿಮ್ಮ ಮುಖ್ಯಸ್ಥರು ಮಾತನಾಡುತ್ತಾ ಇದ್ದಾರೆ. ಶಂಕರ್‌ಲಿಂಗೇ ಗೌಡರೇ, ತಾವು ಕುಳಿತುಕೊಳ್ಳಿ, ದಯಮಾಡಿ ಅವರು ಉತ್ತರ ಕೊಟ್ಟಮೇಲೆ ತಾವು ಮಾತನಾಡಿ ಅವರಿಗೆ ಉತ್ತರ ಕೊಡುವುದಕ್ಕೂ ಸಹ ನೀವು ಅವಕಾಶ ಕೊಡುವುದಿಲ್ಲ ಅಂದರೆ ಹೇಗೆ?

ಶ್ರೀ ವಾಟಾಳ್ ನಾಗ್‌ರಾಜ್: ಅವರು ಉತ್ತರ ಕೊಡುವುದಕ್ಕೂ ಮುಂಚೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಇದರ ಬಗ್ಗೆ ನಾವು ಈ ಸದನದಲಿ ಒಂದಲ್ಲ ಹತ್ತು ಬಾರಿ ಈ ಸದನದಲ್ಲಿ ಹೇಳಿದ್ದೇವೆ. ಅಧಿಕಾರಶಾಹಿ ನಡೆದಿರತಕ್ಕಂತಹ ದುರಂತದ ಬಗ್ಗೆ, ಶಾಸಕರ ಬಗ್ಗೆ ಅವರು ನಡೆದುಕೊಳ್ಳುತ್ತಿರುವಂತಹ ರೀತಿ ಬಗ್ಗೆ, ಶಾಸಕರಿಗೆ ಆಗಿರುವಂತಹ ಅಗೌರವ, ಅಪಮಾನದ ಬಗ್ಗೆ ಈ ಸದನದಲ್ಲಿ ಒಂದಲ್ಲ ಹತ್ತು ಬಾರಿ ಹೇಳಿದ್ದೇವೆ. ಅನೇಕ ಸದಸ್ಯರು ಅಧಿಕಾರ ಶಾಹಿಯಿಂದ ಆಗಿರುವ ಅವಮಾನವನ್ನು ಸಹಿಸಿಕೊಂಡು ಮೌನವಾಗಿದ್ದಾರೆ. ಏಕೆಂದರೆ ಈ ಮಾತನ್ನು ಹೇಳಬೇಕೇ ಬೇಡವೇ ಎಂಬ ಪ್ರಶ್ನೆ ಅವರನ್ನು ಕಾಡುತ್ತಿದೆ. ನೀವು ನಮಗೆ ಒಂದು ಕೈಪಿಡಿಯನ್ನು ಕೊಟ್ಟಿದ್ದೀರಾ? ಅದರಲ್ಲಿ ನೀವು ನೀತಿ, ನಿಯಮಾವಳಿಗಳನ್ನು ನಿರೂಪಣೆ ಮಾಡಿದ್ದೀರಾ? ಶಾಸಕರು

ಬಂದಾಗ ಒಬ್ಬ ಅಧಿಕಾರಿ ಯಾವ ರೀತಿ ನಡೆದುಕೊಳ್ಳಬೆಕು, ಅವರಿಗೆ ಯಾವ ರೀತಿ ಗೌರವ ಕೊಡಬೇಕು ಎಂಬ ಪ್ರತಿಯೊಂದು ವಿಷಯವನ್ನು ಸ್ಪಷ್ಟಪಡಿಸಿದ್ದೀರಾ? ಈ ಎಲ್ಲಾ ಸೂತ್ರವನ್ನು ಅದರಲ್ಲಿ ಅಳವಡಿಸಿದೆ. ಆದರೆ ಅದು ಪುಸ್ತಕದಲ್ಲಿ ಇದೆಯೇ ಹೊರತು ಕಾರ್ಯಾಚರಣೆ ಆಗುತ್ತಿಲ್ಲ. ಆದರೆ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಶಂಕರ್‌ಲಿಂಗೇಗೌಡರು ಬಹಳ ನೊಂದು ಅತ್ಯಂತ ನೋವಿನಿಂದ ಈ ಮಾತನ್ನು ಹೇಳಿದಾಗ, ಅದು ಇಡೀ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಆದಕಾರಣ ಈ ವಿಷಯವನ್ನು ತಮ್ಮ ಮೂಲಕ ಹೇಳುತ್ತಿದ್ದೇವೆ. ದಯಮಾಡಿ ಈ ವಿಷಯವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು, ಮುಖ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟವಾದ ಆದೇಶವನ್ನು ಹೊರಡಿಸುವುದಕ್ಕೆ ತಾವು ಅವರಿಗೆ ಆದೇಶ ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ.

ಉಪಾಧ್ಯಕ್ಷರು: ಸರಿ ಈಗ ತಾವು ದಯಮಾಡಿ ಕುಳಿತುಕೊಳ್ಳಿ, ನಾಗಪ್ಪನವರು ಉತ್ತರ ಕೊಡಲಿ. ಶ್ರೀನಿವಾಸ್ ಅವರೇ, ಏಕೆ ಈ ರೀತಿ ಮಾಡುತ್ತೀರಿ? ನೀವು ಈ ಪ್ರಶ್ನೆಯನ್ನು ಶೂನ್ಯ ವೇಳೆಯಲ್ಲಿ ಇಟ್ಟಿದ್ದೀರಿ, ಎಷ್ಟು ಜನ ಮಾತನಾಡುವುದು ಹೇಳಿ? ನೀವು ನಿಯಮವನ್ನು ಉಳಿಸಿಕೊಂಡು ಬರಬೇಕು. ನೀವು ಹೀಗೆಲ್ಲಾ ಮಾಡಿದರೆ ಹೇಗೆ? ಎಷ್ಟು ಜನ ಮಾತನಾಡುವುದು ಹೇಳಿ?

(ಗೊಂದಲ)

ಯಡಿಯೂರಪ್ಪನವರೇ ನೀವೇ ಹೇಳಿ, ಶೂನ್ಯ ವೇಳೆಯಲ್ಲಿ ಎಷ್ಟು ಜನ ಮಾತನಾಡುವುದು?

ಶ್ರೀ ಎಂ.ಶ್ರೀನಿವಾಸ್: ಒಂದು ನಿಮಿಷ ಹೇಳುತ್ತೇನೆ. ನಾನು ಶಂಕರಲಿಂಗೇಗೌಡರಿಗೆ ಒಬ್ಬರಿಗೆ ಅಲ್ಲ....

ಉಪಾಧ್ಯಕ್ಷರು: ಅಲ್ಲ, ನೀವು ಏಕೆ ಹೇಳುತ್ತೀರಿ?

ಶ್ರೀ ಎಂ.ಶ್ರೀನಿವಾಸ್: ನಮಗೆ ನೋವಾಗಿರುವುದರಿಂದ ಹೇಳುತ್ತೇನೆ.

ಉಪಾಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ, ಮಂಜುನಾಥ್ ಅವರೇ, ದಯಮಾಡಿ ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ನಿಮ್ಮ ಮುಖ್ಯಸ್ಥರು ಮಾತನಾಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ನಿಮಗೆ ಗೊತ್ತಿರುವ ಹಾಗೆ ಶ್ರೀನಿವಾಸ್‌ರವರು ಎದ್ದಿರಲಿಲ್ಲ. ಸ್ವಾಮಿ, ತಾವು ಹೇಳುತ್ತಿರುವುದು ಸರಿ ಇದೆ. ನೀವು ಸಮಯದ ದೃಷ್ಟಿಯಿಂದ ಹೇಳುತ್ತಿದ್ದೀರಿ.

ಉಪಾಧ್ಯಕ್ಷರು: ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ತಮಗೆ ಗೊತ್ತಲ್ಲಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಾಧ್ಯಕ್ಷರೆ, ತಾವು ಹೇಳುವುದು ಸರಿ ಇದೆ. ನಾವು ಇಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಬಂದಿರುವ ಪ್ರಶ್ನೆ ಶಂಕರ್‌ಲಿಂಗೇಗೌಡರದಾಗಲಿ, ಯಡಿಯೂರಪ್ಪನದಾಗಲಿ, ಇನ್ನೊಬ್ಬರ ಶಾಸಕರದಾಗಲಿ ಅಲ್ಲ, ಅಧಿಕಾರಿಶಾಹಿ ಯಾವ ರೀತಿ ವರ್ತಿಸುತ್ತಾ ಇದೆ ಎನ್ನುವುದನ್ನೂ ಹೇಳುತ್ತಿದ್ದೇವೆ. ಇವತ್ತು ಶಂಕರ್‌ಲಿಂಗೇಗೌಡರಿಗೆ ಮಾಡಿದರು, ನಾಳೆ ಇನ್ನೊಬ್ಬರಿಗೆ ಮಾಡುತ್ತಾರೆ. ಆದಕಾರಣ ತಾವು ಈ ವರ್ತನೆಯನ್ನು ನಿಲ್ಲಿಸಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಉಪಾಧ್ಯಕ್ಷರು: ಇಲ್ಲಿ ನಾವು ಯಾರಿಗೂ ದೂಷಣೆ ಮಾಡುತ್ತಾ ಇಲ್ಲ. ನಾವು ಹೇಳುತ್ತಿರುವುದೇನೆಂದರೆ ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಶ್ರೀನಿವಾಸ್ ಅವರು ಹೇಳಿದ್ದು ಏನೆಂದರೆ, ಅನೇಕ ಸುತ್ತೋಲೆಗಳನ್ನು ಕಳುಹಿಸಿದರೂ ಅವರು ಸೇರಿಸುವುದಿಲ್ಲ. ಅವರನ್ನು ಕರೆಯುವುದಿಲ್ಲ.

ಉಪಾಧ್ಯಕ್ಷರು: ಅವರು ಉತ್ತರ ಕೊಡುವವರೆಗಾಗದರೂ ಸೌಜನ್ಯ ಬೇಕಲ್ಲಾ, ಅದನ್ನು ಕೇಳುವಂತಹ ಸೌಜನ್ಯ ಬೇಕಲ್ಲಾ. ನೀವೇನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಅವರು ಉತ್ತರ ಕೊಡುವ ತನಕ ಆದರೂ ಕೇಳಬೇಕಲ್ಲಾ, ಅವರು ಉತ್ತರ ಕೊಟ್ಟಮೇಲೆ ನೀವು ಮಾತಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಅದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿರುವುದು, ಬೇರೆ ವಿಷಯ ಅಲ್ಲ....

ಉಪಾಧ್ಯಕ್ಷರು: ಅವರು ಉತ್ತರ ಕೊಟ್ಟಮೇಲೆ ಮಾತನಾಡಿ, ದಯಮಾಡಿ ತಾವು ಕುಳಿತುಕೊಳ್ಳಿ. ನಾಗಪ್ಪನವರೇ, ತಾವು ಹೇಳಿ. ಅವರು ಉತ್ತರ ಕೊಟ್ಟಮೇಲೆ ಮಾತನಾಡಿ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ನಾಗಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ಮಾತನಾಡಿದ ಹಾಗೆ 4.4.1997ರಲ್ಲಿ ಮಾನ್ಯ ಶ್ರೀ ಶಂಕರ್‌ಲಿಂಗೇಗೌಡರು ಮೈಸೂರಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭೇಟಿ ಕೊಟ್ಟು ಕೆಲವು ಕಡತಗಳು ಬೇಕು ಎಂದು ಕೇಳಿದ್ದಾರೆ. ಆಗ ಅಲ್ಲಿರುವರು, ಈ ಕಛೇರಿಯಲ್ಲಿ ಆ ಕಡತಗಳು ಇಲ್ಲ, ಬೇರೆ ಕಛೇರಿಯಲ್ಲಿ ಇದೆ, ಅಲ್ಲಿಗೆ ಬನ್ನಿ ಕೊಡುತ್ತೇವೆ ಎಂದು ಕರೆದುಕೊಂಡು ಹೋದರು. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಮಾತುಕತೆ ನಡೆದು, ಸ್ವಲ್ಪ ಜೋರಾಗೆ ನಡೆದು ತಳ್ಳಾಟ ಗಿಲ್ಲಾಟ ಎಲ್ಲವೂ ಆಗಿದೆ. ಅದರ ಬಗ್ಗೆ ಒಂದು ದೂರು ಕೂಡ ಕೊಟ್ಟಿದ್ದಾರೆ. ಆ ದೂರಿನ ಮೇಲೆ ನಾವು ಬೋರೆಗೌಡರು ಎಂಬುವರನ್ನು ವಿಚಾರಣೆಗೆ ನೇಮಿಸಿದೆವು.

ಅವರು ವಿಚಾರಣೆ ಮಾಡಿ ಮೇಲ್ನೋಟಕ್ಕೆ ಅಧಿಕಾರಿಗಳ ವರ್ತನೆ ಸರಿ ಇಲ್ಲ ಎಂದು ಅವರೂ ಕೂಡ ವರದಿ ಕೊಟ್ಟಿದ್ದಾರೆ. ಅದರ ಬಗ್ಗೆ ಈಗಾಗಲೇ ಒಬ್ಬರ ಮೇಲೆ ಕ್ರಮ ತೆಗೆದುಕೊಂಡು ಈಗಾಗಲೇ ಅವರನ್ನು ವರ್ಗ ಮಾಡಿದ್ದೇವೆ. ಇನ್ನೊಬ್ಬರಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದೇವೆ, ಆ ಶೋಕಾಸ್ ನೋಟಿಸ್‌ಗೆ ರಿಪ್ಲೈ ಬಂದಮೇಲೆ, ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಶಂಕರ್‌ಲಿಂಗೇಗೌಡರು ಏನು ಹೇಳಿದರು, ಸಿದ್ದರಾಮಯ್ಯನವರ....

(ಗೊಂದಲ)

ಮಾನ್ಯ ಸದಸ್ಯರು: ಶಾಸಕರನ್ನು ತಳ್ಳಾಡಿದ್ದಾರೆ, ಶಾಸಕರನ್ನು ತಳ್ಳಾಡಿದಂತಹ ಅಧಿಕಾರಿಯನ್ನು ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್.ಶಂಕರ್‌ಲಿಂಗೇಗೌಡ: ಮೇಲ್ನೋಟಕ್ಕೆ ಸಾಬೀತಾದ ಮೇಲೆ ಕ್ರಮ ಏನು? ಆ ದಢೂತಿ ಆದ ಮನುಷ್ಯ ನನ್ನ ಮೇಲೆ ಬೀಳುವುದಕ್ಕೆ ಬಂದಿದ್ದ.

ಉಪಾಧ್ಯಕ್ಷರು: ಮಂಜುನಾಥ್ ಅವರೇ ಅವರು ಉತ್ತರ ಕೊಟ್ಟ ಮುಗಿಸಿದ ಮೇಲೆ ತಾವು ಮಾತನಾಡಿ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: ಅವರಿಬ್ಬರನ್ನು ಸಸ್ಪೆಂಡ್ ಮಾಡಬೇಕು,

ಶ್ರೀ ಹೆಚ್.ನಾಗಪ್ಪ: ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದೇನಲ್ಲಾ.

ಉಪಾಧ್ಯಕ್ಷರು: ಅವರು ಉತ್ತರ ಮುಗಿಸುವ ತನಕ ನಿಮಗೆ ಸಮಾಧಾನ ಇಲ್ಲಾ ಎಂದರೆ ಏನು ಮಾಡಬೇಕು ಹೇಳಿ?

ಶ್ರೀ ಹೆಚ್.ನಾಗಪ್ಪ: ತಳ್ಳಾಡಿರುವುದು ಶಂಕರ್‌ಲಿಂಗೇಗೌಡರನ್ನಲ್ಲ, ಅವರ ಜೊತೆಯಯಲ್ಲಿ ಸುಮಾರು 30-40 ಜನ ಬಂದಿದ್ದರು. ಮತ್ತು ಅವರಿಗೂ ಕೂಡ....

(ಗೊಂದಲ)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಆ ಸಮಯದಲ್ಲಿ ಪೋಲೀಸರು ಇಲ್ಲ ಎಂದಿದ್ದರೆ ರಣರಂಗ ಆಗುತ್ತಾ ಇತ್ತು.

ಶ್ರೀ ಹೆಚ್.ನಾಗಪ್ಪ: ಅದೇನೋ ಆಗಿದೆ ಅದರ ಬಗ್ಗೆ ಅವರು ವರದಿಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಈಗಾಗಲೇ ಒಬ್ಬರನ್ನು ವರ್ಗಾವಣೆ ಮಾಡಿದ್ದೇವೆ. ಇನ್ನುಳಿದವರ ಮೇಲೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದೇನೆ. ಮತ್ತು

ಅವರು ಏನೋ ಹೇಳಿದರು, ಸಿದ್ದರಾಮಯ್ಯನವರು....ಈ ಬಗ್ಗೆ ಯಾವ ಒಂದು ಸಂಗತಿ ಕೂಡ ಅವರು ಹೇಳಿಲ್ಲ.

(ಗೊಂದಲ)

ಶ್ರೀ ಹೆಚ್.ನಾಗಪ್ಪ: ಇಲ್ಲಾ, ಇಲ್ಲಾ, ಆ ಬಗ್ಗೆ ನೀವು ಮಾತನಾಡಿದ್ದೀರಿ ಅವರೂ ಕೂಡ ಕೆಟ್ಟದಾಗಿ ಮಾತನಾಡಿದ್ದಾರೆ, ಈಗ ಅದೆಲ್ಲಾ ಬೇಡ, ಅದೆಲ್ಲಾ ತೆಗೆದುಕೊಂಡರೆ ಎಲ್ಲಾ ಹೊರಗೆ ಬರುತ್ತದೆ, ಆದಕಾರಣ ಅದೆಲ್ಲಾ ಬೇಡ. ಈಗ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳುತ್ತಿದ್ದೇನಲ್ಲಾ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಎಲ್ಲರೂ ಹೀಗೆ ಎದ್ದು ನಿಂತರೆ, ಅವರು ಸದನ ನಡೆಸುವುದಾದರೂ ಹೇಗೆ? ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

ಉಪಾಧ್ಯಕ್ಷರು: ಅವರು ಏನು ಹೇಳಿದ್ದಾರೆ ಅಂದರೆ, ಯಾರ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅವರ ಮೇಲೆ ತೆಗೆದುಕೊಂಡಿದ್ದೇವೆ. ಮುಂದೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದರ ಮೇಲೆ ಏನಾದರೂ ಇದ್ದರೆ ತಾವು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸ್ವಾಮಿ, ತಾವು ಇಲ್ಲಿ ಕುಳಿತಿರುವುದು ರಕ್ಷಣೆ ಕೊಡಬೇಕೆಂದು. ತಾವೇ ಹೇಳಿ, ಅವರು ಕೊಟ್ಟಿರುವ ಉತ್ತರದಿಂದ ತಮಗೆ ಸಮಾಧಾನ ಆಯಿತಾ? ಇವತ್ತು ನನಗೆ, ನಾಳೆ ನಿಮಗೆ, ನಾಡಿದ್ದು ಮತ್ತೊಬ್ಬರಿಗೆ, ಇನ್ನು ಮುಂದೆ ಈ ರೀತಿ ಆಗುವುದು ಬೇಡ ಎಂಬುದು ನಮ್ಮ ವಾದ. ಇಲ್ಲಿ ಪ್ರಶ್ನೆ ಏನೆಂದರೆ, ನಾವು ಯಾವತ್ತಾದರೂ ಅಧಿಕಾರಿನ ಸಸ್ಪೆಂಡ್ ಮಾಡಿ ಎಂದು ಕೇಳಿದ್ದೇವ? ಅಥವಾ ಯಾವತ್ತಾದರೂ ಅವರ ವಿರುದ್ಧ ಏನಾದರೂ ದೂರು ಕೊಟ್ಟಿದ್ದೇವಾ? ನಾವು ಇಲ್ಲಿಗೆ ಬಂದಿರುವುದು ಜನರ ಪರವಾಗಿ ಕೆಲಸ ಮಾಡುವುದಕ್ಕೆ. ಆ ರೀತಿ ಜನರ ಪರವಾಗಿ ಕೆಲಸ ಮಾಡುವುದಕ್ಕೆ ಹೋದಂತಹ ಸಮಯದಲ್ಲಿ ಈ ರೀತಿ ಆಗಿದೆ. ಬಹುತೇಕ ಕಡೆ ಹಣ ಇಲ್ಲದೆ ಶೆಡ್ ಅಲಾಟ್ ಮಾಡುವುದಿಲ್ಲ. ಇಂತಹ ಪರಿಸ್ಥಿತಿ ಬಂದಾಗ ಅವರು ಅಲ್ಲಿಗೆ ಹೋದರು. ಆ ಸಮಯದಲ್ಲಿ ಈ ಘಟನೆ ನಡೆದಿದೆ. ನಾನು ಹೇಳುವುದೇನೆಂದರೆ, ಅವರನ್ನು ವರ್ಗಾವಣೆ ಮಾಡುವುದು ಬೇಡ, ನಮ್ಮ ಒತ್ತಾಯ ಏನೆಂದರೆ, ಈ ರೀತಿಯಾಗಿ ಶಾಸಕರ ಜೊತೆ ಅನುಚಿತವಾಗಿ ವರ್ತಿಸಿದರೆ, ಅಂತಹ ಅಧಿಕಾರಿಯನ್ನು ಒಂದು ಸಾರಿ ಸಸ್ಪೆಂಡ್ ಮಾಡಿದರೆ, ಇದರಿಂದ ಉಳಿದಂತಹ ಅಧಿಕಾರಿಗಳಿಗೆ ಬುದ್ಧಿ ಬರುತ್ತದೆ. ಆಗ ಅವರು ಶಾಸಕರಿಗೆ ಗೌರವ ಕೊಡಬೇಕು ಎಂದು ತಿಳಿದುಕೊಳ್ಳುತ್ತಾರೆ. ಈ ರೀತಿ ನೀವು ಮಾಡಿದರೆ ಅವರಿಗೆ ಒಂದು ಒಳ್ಳೆಯ

ಸಿಗ್ನಲ್ ಕೊಟ್ಟಂತೆ ಆಗುತ್ತದೆ. ಇಲ್ಲಾ ನೀವು ಅಧಿಕಾರಿಗಳು ಮಾಡಿರುವುದೇ ಸರಿ ಎಂದು ಅವರನ್ನು ವರ್ಗಾವಣೆ ಮಾಡುತ್ತೇವೆ ಎಂದರೆ, ನೀವು ಮಾಡಿದ್ದಾದರೂ ಏನು? ಇದರಿಂದ ನಿಮಗೆ ಸಮಾಧಾನವಾಗುತ್ತದೆಯೇ? ಇವತ್ತು ನಮ್ಮ ಶಾಸಕರು, ನಿಮ್ಮ ಶಾಕಸರು ಎಂಬ ಪ್ರಶ್ನೆ ಅಲ್ಲ. ಈಗಾಗಲೇ ಶಾಸಕರಿಗೆ ಮರ್ಯಾದೆ ಇಲ್ಲದಂತೆ ಆಗಿದೆ. ನಾವು ಅವರಿಗೆ ಪ್ರಶ್ನೆ ಕೇಳುವ ಹಾಗೆ ಇಲ್ಲ. ಈ ರೀತಿಯ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡುವ ಹಾಗಿಲ್ಲ. ಇಂತಹ ವಿಶೇಷವಾದ ಘಟನೆ ನಡೆದಿದೆ ಎಂದು ತಮಗೆ ಮನವರಿಕೆ ಆಗಿರಬೇಕಾದರೆ, ಅವರನ್ನು ಸಸ್ಪೆನ್‌ಷನಲ್ಲಿ ಇಡಿ ಎಂದರೆ ಹಿಂದೂ-ಮುಂದೂ ನೋಡುತ್ತೀರಿ ಅಂದರೆ, ಸ್ವಾಮಿ ನಮಗೆ ಗೊತ್ತಿಲ್ಲ, ತಾವೇ ನಮಗೆ ರಕ್ಷಣೆ ಕೊಡಬೇಕು.

ಉಪಾಧ್ಯಕ್ಷರು: ಅವರು ಏನು ಹೇಳಿದ್ದಾರೆ ಎಂದರೆ, ಈಗಾಗಲೇ ಅವರು ಕ್ರಮ ತೆಗೆದುಕೊಂಡಿರುವುದು, ಮತ್ತು ವರ್ಗ ಮಾಡಿರುವುದು ಈ ಬಗ್ಗೆ ಹೇಳಿದ್ದಾರೆ, ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನೂ ಸಹ ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗ್‌ರಾಜ್: ಟ್ರಾನ್ಸ್‌ಫರ್ ಕ್ರಮ ಅಲ್ಲ, ಅವರು ಅಲ್ಲೇ ಇರಲಿ.

ಶ್ರೀ ಹೆಚ್.ಎನ್.ನಂಜೇಗೌಡ: ಒಂದು ಕೆಲಸ ಮಾಡಿ, ಅವರನ್ನು ಅಲ್ಲಿಗೆ ಟ್ರಾನ್ಸಫರ್ ಮಾಡಿ, ಇಲ್ಲ If you mean business, if you want to commend discipline in the Department, teach them a lesson, suspend them. Otherwise bring them back. We will handle them.

ಶ್ರೀ ಎಂ.ಶ್ರೀನಿವಾಸ್: ಮಾನ್ಯ ಉಪಾಧ್ಯಕ್ಷರೆ, ಶಂಕರಲಿಂಗೇಗೌಡರು ಏನು ಹೇಳಿದರು, ಅದೇ ರೀತಿಯಲ್ಲಿ ನನಗೆ ಇವೊತ್ತು ಬೆಳಿಗ್ಗೆ ಬಂದಂಥಾದ್ದು....

ಉಪಾಧ್ಯಕ್ಷರು: ತಾವು ನೋಟೀಸ್ ಕಳುಹಿಸಿದ್ದೀರೋ? ತಾವು ಇದರ ಬಗ್ಗೆಯೇ ಮಾತನಾಡುತ್ತಿದ್ದೀರೆಂದು ತಿಳಿದುಕೊಂಡೆ. ತಾವು ನೋಟೀಸ್ ಕಳುಹಿಸಬೇಕು. ತಾವು ಮಾತನಾಡಿದರೆ ಬೇರೆ ಸದಸ್ಯರೂ ಸಹ ಎದ್ದು ನಿಂತು ಹೇಳುತ್ತಾರೆ. ಹಾಗಾದಾಗ ಕಲಾಪ ನಡೆಸುವುದಾದರೂ ಹೇಗೆ? ಈಗ ಶಂಕರಲಿಂಗೇಗೌಡರು ಯಾವ ವಿಷಯ ಪ್ರಸ್ತಾಪಿಸಿದರೋ ಅದರ ಬಗ್ಗೆ ಮಾತನಾಡುವುದಾದರೆ ಮಾತನಾಡಿ. ಇಲ್ಲದಿದ್ದರೆ, ದಯಮಾಡಿ ಕುಳಿತುಕೊಳ್ಳಿ, ಹೊಸ ವಿಷಯ ಪ್ರಸ್ತಾಪಿಸುವ ಹಾಗಿದ್ದರೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಎಂ.ಶ್ರೀನಿವಾಸ್: ನಾನು ನೋಟೀಸ್ ಕಳುಹಿಸಿಕೊಡುತ್ತೇನೆ. ನಾನು ಬಹಳಷ್ಟು ನೋಟೀಸ್ ಕಳುಹಿಸಿದ್ದರೂ ಒಂದೂ ಬಂದಿಲ್ಲ, ಅದಕ್ಕೋಸ್ಕರ ಹೇಳಿದ್ದು.

ಉಪಾಧ್ಯಕ್ಷರು: ಶೂನ್ಯ ವೇಳೆಯಲ್ಲಿ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇವೆ. ನೀವು ನೋಟೀಸ್ ಬಂದಿಲ್ಲವೆಂದು ಹೇಳಿದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಈಗ ಕಡತ ತೆಗೆಸಿ ನೋಡಿದರೆ ಯಾರ್ಯಾರಿಗೆ ಎಷ್ಟೆಷ್ಟು ಅವಕಾಶ ಕೊಟ್ಟಿದ್ದೇವೆಂದು ತಮಗೆ ಗೊತ್ತಾಗುತ್ತದೆ. ಕಡತ ತೆಗೆಸಿ ಯಾವ್ಯಾವ ಪಕ್ಷಕ್ಕೆ ಎಷ್ಟೆಷ್ಟು ಅವಕಾಶ ಕೊಡಲಾಗಿದೆಯೆಂಬುದನ್ನು ನೋಡೋಣ. ತಾವು ದಯಮಾಡಿ ಕುಳಿತುಕೊಳ್ಳಿ. ಮೈಸೂರಿನ ಎ.ಪಿ.ಎಂ.ಸಿ ಬಗ್ಗೆಯಾದರೆ ಮಾತನಾಡಿ, ಬೇರೆ ವಿಷಯವಾದರೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ವಾಟಾಳ್ ನಾಗರಾಜ್: ಇದೇ ವಿಚಾರವಾಗಿ ಶಾಸಕರಿಗಾಗಿರುವ ಅನ್ಯಾಯದ ಬಗ್ಗೆ ಅವರು ಹೇಳುತ್ತಿದ್ದಾರೆಯೇ ವಿನಹ ಬೇರೆ ವಿಚಾರವಲ್ಲ.

ಉಪಾಧ್ಯಕ್ಷರು: ನೀವು ಏಕೆ ವಕಾಲತ್ತು ವಹಿಸುತ್ತೀರಿ? ಶೂನ್ಯ ವೇಳೆಯ ಕಲಾಪವನ್ನು ಎಲ್ಲಿಯ ತನಕ ನಡೆಸಬೇಕೆಂಬ ಬಗ್ಗೆ ತಾವೇ ನಿರ್ಧರಿಸಿ. ಇದನ್ನು ಆರು ಗಂಟೆಕಾಲ ನಡೆಸುವುದಾದರೆ ನನ್ನದೇನೂ ತಕರಾರಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದು ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದೇ ವಿಷಯವನ್ನು ಪ್ರತಿ ಬಾರಿಯೂ ಪ್ರಸ್ತಾಪಿಸುವುದಾಗಿದ್ದರೆ ಸದನ ನಡೆಸುವುದಾದರೂ ಹೇಗೆ? ತಾವು ಕಲಾಪ ನಡೆಸಲು ದಯವಿಟ್ಟು ಸಹಕರಿಸಬೇಕು.

ಶ್ರೀ ಎಂ.ಶ್ರೀನಿವಾಸ್: ನನ್ನ ಡಿವಿಜನ್‌ನಲ್ಲಿ, ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ನನ್ನನ್ನು ಹೊರತುಪಡಿಸಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಇದನ್ನು ನಾನು ಹೇಳುತ್ತಿದ್ದೇನೆಯೇ ವಿನಾಃ ಬೇರೇನೂ ಅಲ್ಲ.

ಉಪಾಧ್ಯಕ್ಷರು: ತಾವು ನೋಟೀಸ್ ಕಳುಹಿಸಿಕೊಡಿ.

ಶ್ರೀ ಎಂ.ಶ್ರೀನಿವಾಸ್: ನನ್ನನ್ನು ಬಿಟ್ಟು ಇವೊತ್ತು ಕಾರ್ಯಕ್ರಮ ನಡೆಸುತ್ತಿರುವುದರ ಬಗ್ಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು: ತಾವು ಬೇರೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೋಟೀಸ್ ಕಳುಹಿಸಿಕೊಡುತ್ತೇವೆ. ನಾಳೆ ಇದರ ಬಗ್ಗೆ ಒಂದು ಗಂಟೆಯಾದರೂ ಚರ್ಚೆ ಯಾಗಲಿ. ಒಂದು ಸಾರಿ ನೀವು ಸುತ್ತೋಲೆ ಕಳುಹಿಸಿದ ನಂತರ ಬಿ.ಜೆ.ಪಿ. ಶಾಸಕರಿಗೆ ಬೇರೆ ಕಾನೂನು ನಿಮಗೆ ಬೇರೆ ಕಾನೂನು ಇದೆಯೇ?

ಉಪಾಧ್ಯಕ್ಷರು: ಯಡಿಯೂರಪ್ಪನವರೇ, ನೋಟೀಸ್ ಕಳುಹಿಸಿಕೊಡಿ, ಬೇರೆ

ಸಮಯದಲ್ಲಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್: ಇದರ ಬಗ್ಗೆ ಮಾತನಾಡಬಾರದು ಎಂದರೆ ನಾನು ಸದನದಲ್ಲಿ ಏಕಿರಬೇಕು? ಈ ಸದನದಲ್ಲಿ ನಾನು ಬಹಳ ಹಿಂದಿನಿಂಲೂ ಸದಸ್ಯನಾಗಿದ್ದು, ನನಗೆ ಹಕ್ಕು ಇಲ್ಲವೇ? ಏನೂ ಮಾತನಾಡಬಾರದೇ? ಮೊದಲು ನಾನು ಹೇಳುವುದನ್ನು ಕೇಳಿದ ನಂತರ ಮಾತನಾಡಬಾರದೆಂದರೆ ನಾನು ಮಾತನಾಡುವುದಿಲ್ಲ. ಇವೊತ್ತು ನನ್ನ ಡಿವಿಜನ್‌ನಲ್ಲಿ ಮಂತ್ರಿಗಳು, ಎಂ.ಪಿಗಳು ಕಾರ್ಪೊರೇಷನ್‌ನವರೆಲ್ಲರೂ ಸೇರಿಕೊಂಡು ನನ್ನನ್ನು ಬಿಟ್ಟು ಕಾರ್ಯಕ್ರಮ ನಡೆಸುತ್ತಿದ್ದಾರೆ. ಇದನ್ನು ಹೇಳಬಾರದೇ? ಇದನ್ನು ಯಾರಿಗೆ ಹೇಳಲಿ? ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರ ಯಾರಿಗೆ ಹೇಳಲಿ?

ಶ್ರೀ ಎ,ರುಕ್ಮಯ್ಯ ಪೂಜಾರಿ: ಇದರ ಬಗ್ಗೆ ಸದನದಲ್ಲಿ ಹಲವಾರು ಬಾರಿ ಪ್ರಸ್ತಾಪವಾಗಿದ್ದರೂ ಈಗಲೂ ಅದೇ ರೀತಿ ಮುಂದುವರಿಯುತ್ತಿದೆ.

ಉಪಾಧ್ಯಕ್ಷರು: ಶಿವಪ್ಪನವರೇ, ತಾವೇ ಹೇಳಿ, ನೀವೆಲ್ಲರೂ ಹಿರಿಯ ಸದಸ್ಯರುಗಳಾಗಿದ್ದೀರಿ. ಈಗ ಅವರು ಮಾತನಾಡಿದರೆ ಮತ್ತೊಬ್ಬರು ಎದ್ದು ನಿಂತು ಮತ್ತೊಂದು ಪ್ರಶ್ನೆ ಕೇಳುತ್ತಾರೆ. ನನ್ನದೇನೂ ತಕರಾರಿಲ್ಲ, ಶೂನ್ಯ ವೇಳೆಯಲ್ಲಿ ಆರು ಗಂಟೆ ಬೇಕಾದರೂ ಮಾತನಾಡಿ. ಎಲ್ಲವನ್ನೂ ಶೂನ್ಯ ವೇಳೆಯನ್ನಾಗಿ ಮಾಡೋಣ, ಬೇರೆ ಕಲಾಪಗಳು ಬೇಡ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರ ಅನೇಕ ಬಾರಿ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದೆ. ಮುಖ್ಯಮಂತ್ರಿಗಳೂ ಸಹ ಈ ವಿಚಾರದಲ್ಲಿ ಅಧಿಕಾರಿಗಳನ್ನು ಕರೆಸಿ ಕಟ್ಟುನಿಟ್ಟಾಗಿ ಹೇಳಿದ್ದಾರೆ. ಪ್ರಾಯಶಃ ಇನ್ನೊಂದು ಬಾರಿ ಈ ವಿಚಾರ ಮತ್ತೆ ಸದನದಲ್ಲಿ ಬರಲಾರದ ರೀತಿ ಮುಖ್ಯಮಂತ್ರಿಯಾದಿಯಾಗಿ ನಾವೆಲ್ಲರೂ ಜವಾಬ್ದಾರಿ ತೆಗೆದುಕೊಂಡು ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ತಾವು ಎಷ್ಟೋ ಬಾರಿ ಈ ಸದನದಲ್ಲಿ ಉತ್ತರಿಸಿದ್ದೀರಿ. ಇದು ಸರ್ಕಾರದ ಬೇಜವಾಬ್ದಾರಿತನ, ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವಿಲ್ಲದಿರುವುದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಸರ್ಕಾರದ ಈ ಧೋರಣೆ ಸರಿಯಲ್ಲ, ಇದು ಒಳ್ಳೆಯ ನೀತಿಯಲ್ಲ, ಶಾಸಕರುಗಳಿಗೆ ಮಾಡತಕ್ಕಂಥ ಅಗೌರವ, ಅಪಮಾನ ಇದಾಗಿದೆ. ಇದರ ಬಗ್ಗೆ ಪ್ರತಿ ಬಾರಿಯೂ ಸದನದಲ್ಲಿ ಹೇಳಿ ಹೇಳಿ ಸಾಕಾಗಿದೆ, ಅಧಿಕಾರಿಗಳಿಂದ ದೌಜನ್ಯ ನಡೆಯುತ್ತಿದೆ.

(ಈ ಹಂತದಲ್ಲಿ ಸರ್ಕಾರದ ಧೋರಣೆ ಪ್ರತಿಭಟಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ

ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು: ನನ್ನ ನೋವನ್ನು ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ, ನನ್ನ ನೋವನ್ನು ಅರ್ಥೈಸಿಕೊಂಡು ಅದಕ್ಕೆ ಏನೂ ಪರಿಹಾರ ಮಾಡಿಲ್ಲ. ಅದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದರೆ, ಇವರಿಗೆ ದೊಡ್ಡ ಗಂಟಲು ಇದೆ, ಪ್ರತಿಯೊಂದು ವಿಚಾರಕ್ಕೂ ಪ್ರಸ್ತಾಪ ಮಾಡುತ್ತಾರೆ' ಎಂದರೆನಾವೇಕೆ ಇಲ್ಲಿಗೆ ಬರಬೇಕು? ಅಂಥಾದ್ದರಲ್ಲಿ ನನಗೇನೂ ಧ್ವನಿಯಿಲ್ಲವೇ? ನಮ್ಮನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿರುವವರ ಸಮಸ್ಯೆಗಳ ಬಗ್ಗೆ ನಾನು ಇಲ್ಲಿ ಪ್ರಸ್ತಾಪಿಸಬಾರದೇ? ಇವರು ಹಿರಿಯರಾಗಿದ್ದು ಸದಸ್ಯರ ಹೆಸರನ್ನು ಹಿಡಿದು ಹೇಳುವಂತಾದ್ದಾದರೆ ಮನಸ್ಸಿಗೆ ನೋವಾಗುವುದಿಲ್ಲವೇ? ನಿಮ್ಮಂಥವರು ನಮಗೆ ಮಾರ್ಗದರ್ಶನ ಮಾಡಬೇಕು. ಈ ತರಹ ಒಂದು ರೀತಿ ಅವಹೇಳನ ಮಾಡಿದರೆ ಮನಸ್ಸಿಗೆ ಬಹಳ ನೋವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ನಿಮಗೇನೋ ದೊಡ್ಡ ಗಂಟಲು ಇದೆಯೆಂದು "don't shout down" ಎಂದು ಹೇಳಿದೆ. ನಿಮ್ಮನ್ನು ಅಪಮಾನಗೊಳಿಸಬೇಕೆಂದು ಹೇಳಿದ್ದಲ್ಲ. You cannot dictate terms like that to me. ಯಾರಿಗೆ ದೊಡ್ಡ ಗಂಟಲು ಇದೆಯೋ, ದೊಡ್ಡ ಗಂಟಲು ಇರುವವರು ಶೌಟ್ ಮಾಡಬಾರದೆಂದು ಹೇಳಿದೆವು. ಇದರಲ್ಲಿ ನಿಮಗೆ ಅಪಮಾನ ಮಾಡುವಂಥಾದ್ದೇನಿದೆ? ಸನ್ಮಾನ್ಯ ಶಾಸಕರೆಂದು ಹೇಳಿದೆವು, ಸನ್ಮಾನ್ಯ ಶಾಸಕರು ಕೂಗಾಡಬಾರದೆಂದು ಹೇಳಿದೆವು. ಇದರಲ್ಲಿ ಅಪಮಾನ ಪ್ರಶ್ನೆಯೇನಿದೆ? ನೀವು ಹೇಳಿದಂತೆ ನಡೆದುಕೊಳ್ಳಬೇಕೇ? You cannot dictate terms to me like that.

ಉಪಾಧ್ಯಕ್ಷರು: ಸದನದ ಕಲಾಪ ಯಾವ ರೀತಿ ನಡೆಯಬೇಕೆಂಬ ಬಗ್ಗೆ ಒಂದು ನಿರ್ಣಯ ಮಾಡಿ. ನಿಯಮಾವಳಿ ಪ್ರಕಾರ ಸದನದ ಕಲಾಪ ನಡೆಯಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ತಾವು ಪದೇ ಪದೇ ಈ ರೀತಿ ಮಾಡಿದರೆ ಹೇಗೆ?

ಶ್ರೀ ಹೆಚ್.ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆ ಎಷ್ಟು ಘಂಟೆಯಿರಬೇಕೆಂಬ ಬಗ್ಗೆ ನಿಗದಿ ಮಾಡಿ. ಇದಕ್ಕೇನಾದರೂ ಅರ್ಥವಿದೆಯೇ? We must set an example to others. This is the House. ರೀತಿ-ನೀತಿ ಇದೆ, ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇದೆ, ಪ್ರೊಸೀಜರ್ ಇಲ್ಲವೇ? ದಿವಸಗಟ್ಟಳೆ ಶೂನ್ಯ ವೇಳೆಯೇ? ನಾನು ಈಗ ಹೇಳುತ್ತೇನೆ: We have got number of matters to be raised during Zero hour.

(INTERRUPTIONS)

SRI H.SHIVAPPA: We have to go as per the Rules and Regulations. There has to be a procedure. ಪ್ರೊಸೀಜರ್ ಇದೆ, ಇದಕ್ಕೆ ತಾವು ರೂಲಿಂಗ್ ಕೊಡಬೇಕು. ನಮಗೂ ತಾಳ್ಮೆ ಇದೆ, ವಿಷಯವನ್ನು ಯಾವ ರೀತಿ ರೈಸ್ ಮಾಡಬೇಕು, ಯಾವ ರೀತಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಶೂನ್ಯ ವೇಳೆ ಎಷ್ಟು ಕಾಲ ಇರಬೇಕೆಂಬುದನ್ನು ಮೊದಲು ನಿಗದಿ ಮಾಡಬೇಕು. What is the duration of the Zero Hour? It has to be fixed first. ದಯವಿಟ್ಟು ತಾವು ರೂಲಿಂಗ್ ಕೊಡಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಉಪಾಧ್ಯಕ್ಷರೆ, ಸದಸ್ಯರಿಗೆ ತಾವು ಏನಾದರೂ ಹೇಳಬೇಕೇ ಹೊರತು....

(ಗೊಂದಲ)

ಶ್ರೀ ಹೆಚ್.ಶಿವಪ್ಪ: 'ಇವರು ಯಾರು ಕೇಳುವುದಕ್ಕೆ?' ಎಂದು ಹೇಳುತ್ತಾರೆ, ಇವರು ಯಾರು ನನ್ನನ್ನು ಕೇಳುವುದಕ್ಕೆ? I am also a Member of this august House. I am answerable to the Speaker. He cannot question my rights..

(INTERRUPTIONS)

SRI H.SHIVAPPA: I have to tell the House. When the House goes astray I have to tell. I am bringing to the notice of the chair... ಈಗ ತಾವು ರೂಲಿಂಗ್ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಈ ಪ್ರಕರಣವನ್ನು ಇಲ್ಲಿಗೇ ಮುಕ್ತಾಯ ಮಾಡುವುದು ಒಳ್ಳೆಯದು. ಪ್ರಾಯಶಃ ನಿಯಮಾವಳಿ ಪ್ರಕಾರ ಸದನದ ಕಲಾಪ ನಡೆಯಲಿ. ದಯಮಾಡಿ ಮುಂದಿನ ವಿಚಾರ ಬಗ್ಗೆ ತಾವು ಮಾರ್ಗದರ್ಶನ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಾಧ್ಯಕ್ಷರೆ, ಶೂನ್ಯ ವೇಳೆಯನ್ನು ಎಷ್ಟು ಇಡಬೇಕು, ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡುವುದು ತಮಗೆ ಬಿಟ್ಟಿರುವ ವಿಚಾರ. ತಮ್ಮ ತೀರ್ಮಾನದಂತೆ ನಾವು ನಡೆದುಕೊಳ್ಳುತ್ತೇವೆ. ಅದರಲ್ಲಿ ಎರಡು ಮಾತಿಲ್ಲ.

ಉಪಾಧ್ಯಕ್ಷರು: ನಾವು ಹೇಳಿದಂತೆ ನಡೆದುಕೊಂಡರೆ ತೊಂದರೆಯಿಲ್ಲ. ನಾವು ಹೇಳಿದಂತೆ ನಡೆದುಕೊಳ್ಳದಿದ್ದರೆ ಏನು ಮಾಡುವುದು? ಅರ್ಧ ಗಂಟೆ ಸಭೆ ಮುಂದಕ್ಕೆ

ಹಾಕೋಣ, ಮತ್ತೊಮ್ಮೆ ಎಲ್ಲರೂ ಕುಳಿತು ಒಂದು ನಿರ್ಣಯ ಮಾಡಿಬಿಡೋಣ. ಏಕೆಂದರೆ ಈ ರೀತಿಯಾದರೆ ನಡೆಸಲು ಆಗುವುದಿಲ್ಲ. ಈ ರೀತಿ ಒಳ್ಳೆದಲ್ಲ ನೀವು ಒಬ್ಬರು ಮಾತನಾಡಲು ನಿಂತರೆ ನಿಮ್ಮ ಹಿಂದೆ ಇಪ್ಪತ್ತು ಮಂದಿ ನಿಲ್ಲುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಬೇರೆ ವಿಚಾರ ಮಾತನಾಡುತ್ತಿದ್ದೇನೆ. ತಮಗೆ ನೋವನ್ನುಂಟು ಮಾಡಬೇಕೆಂದು ನಮ್ಮ ಅಪೇಕ್ಷೆಯಲ್ಲ. ಮಾನ್ಯ ಪ್ರಕಾಶ್‌ರವರು ಯಾವ ಧಾಟಿಯಲ್ಲಿ ಹೇಳಿದ್ದಾರೋ ಅದರ ಬಗ್ಗೆ ನಾವು ಅಬ್ಜಕ್ಷನ್ ಮಾಡಲು ತಯಾರಾಗಿಲ್ಲ. ಈ ಭಾಗದಲ್ಲಿರುವ ಶಾಸಕರಿಗೆ, ವಿಶೇಷವಾಗಿ ಬಿ.ಜೆ.ಪಿ.ಶಾಸಕರಿಗೆ ಹಂತ ಹಂತದಲ್ಲಿ ಅವಮಾನವಾಗುತ್ತಿದೆ. ತಮ್ಮ ಸುತ್ತೋಲೆ ಇದ್ದರೂ ಸಹ ಬಿ.ಜೆ.ಪಿ.ಶಾಸಕರನ್ನು, ಎಂ.ಪಿ.ಯವರನ್ನು ಕಾರ್ಯಕ್ರಮಕ್ಕೆ ಕರೆಯದಿರುವುದು, ಕರೆದು ಮೂಲೆಯಲ್ಲಿ ಕೂರಿಸತಕ್ಕದ್ದು, ಸರ್ಕಾರದ ಕಾರ್ಯಕ್ರಮವು ಶಾಸಕರ ಅಧ್ಯಕ್ಷತೆಯಲ್ಲಿರಬೇಕೆಂದು ಸುತ್ತೋಲೆ ಇದ್ದರು ಸಹ ಆ ಶಾಸಕರ ಹೆಸರನ್ನು ಸೇರಿಸದೆ, ಯಾರಿಗು ಅವಕಾಶ ಕೊಡದಿರುವಂಥ ಹತ್ತಾರು ಉದಾಹರಣೆಗಳು ಇವೆ. ಇದರಿಂದ ನಾವು ನೊಂದು ನಾನು ಕೇಳುವುದೇನೆಂದರೆ ಬಿ.ಜೆ.ಪಿ. ಶಾಸಕರಿಗೆ ಈ ಸುತ್ತೋಲೆ ಅನ್ವಯವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಡಿ. ಬೇರೆ ಎಲ್ಲಾ ಪಕ್ಷದ ಶಾಸಕರು ಅಧ್ಯಕ್ಷತೆ ವಹಿಸಬಹುದು, ಅವರುಗಳನ್ನು ಕಾರ್ಯಕ್ರಮಕ್ಕೆ ಕರೆಯುತ್ತೇವೆ ಎಂದು ಹೇಳಿಬಿಡಿ. ಅಧಿಕಾರಿಗಳು ಸೊಕ್ಕಿನಿಂದ ಮನಬಂದಂತೆ ಎಲ್ಲಿ ಬೇಕಾದರು ಜಾಹೀರಾತು ಕೊಡಬಹುದು, ಶಾಸಕರನ್ನು ಬಿಡಬಹುದು ಆ ರೀತಿ ಸೂಚನೆ ಕೊಟ್ಟಿದ್ದೇವೆ, ಈ ಮೂಲಕ ಬಿ.ಜೆ.ಪಿ.ಯನ್ನು ದಮನ ಮಾಡುವ ಕಾರ್ಯಕ್ರಮವಿದ್ದರೆ ತಾವು ಸ್ಪಷ್ಟಮಾಡಿ. ಇಲ್ಲಿರುವ ಎಲ್ಲಾ ಶಾಸಕರಿಗೆ ಒಂದು ನಿಯಮ, ಬಿ.ಜೆ.ಪಿ.ಶಾಸಕರಿಗೆ ಒಂದು ನಿಯಮ ಎಂಬ ಬಗ್ಗೆ ಸ್ಪಷ್ಟಮಾಡಿ. ಈ ಧೋರಣೆ ಕೊನೆಯಾಗಬೇಕು. ಇನ್ನು ಮುಂದೆ ನಿಯಮಾವಳಿ ಪ್ರಕಾರ ಎಲ್ಲಾ ಶಾಸಕರಿಗೆ ಸಿಗಬೇಕಾದ ಗೌರವ ಸಿಗಬೇಕು. ಬಿ.ಜೆ.ಪಿ. ಶಾಸಕರಿಗೆ ವಿರೋಧ ಪಕ್ಷದ ಶಾಸಕರಿಗೆ ಉದ್ದೇಶಪೂರ್ವಕವಾಗಿ ಕೆಲವು ಮಂತ್ರಿಗಳು ಸೂಚನೆ ಕೊಟ್ಟು ಈ ರೀತಿ ನಿರ್ಲಕ್ಷ್ಯ ಮಾಡುವ ಹತ್ತಾರು ಪ್ರಕರಣಗಳು ನಮ್ಮ ಗಮನಕ್ಕೆ ಬಂದಿದೆ. ಈ ನಿಮ್ಮ ರೀತಿಯನ್ನು ಪ್ರತಿಭಟಿಸಿ ನಾವುಗಳು ಸಭಾತ್ಯಾಗ ಮಾಡುತ್ತಿದ್ದೇವೆ. ಇದೇ ವ್ಯವಸ್ಥೆ ಮುಂದುವರೆದರೆ ನಾವು ನಿಮ್ಮ ಮೇಲೆ ಟಾರ್ಜೆಟ್ ಮಾಡಲು ಸಿದ್ದರಿಲ್ಲ.

(ಈ ಹಂತದಲ್ಲಿ ಬಿ.ಜೆ.ಪಿ.ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಭಾರತೀಯ ಜನತಾ ಪಕ್ಷದ ಶಾಸಕರಿಗೆ ಮಾತ್ರವಲ್ಲ ಯಾವುದೇ ಪಕ್ಷದ ಜನಪ್ರತಿನಿಧಿಯಾಗಿರುವ ಶಾಸಕರಿಗೆ ನಮ್ಮ ಸುತ್ತೋಲೆ ಪ್ರಕಾರ ಗೌರವವನ್ನು ಕೊಡಬೇಕು ಮತ್ತು ಆ ಕ್ಷೇತ್ರದಲ್ಲಿ ನಡೆಯುತಕ್ಕಂಥ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಿಗೆ ಅವರೇ ಅಧ್ಯಕ್ಷತೆಯನ್ನು ವಹಿಸಬೇಕು. ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಸುತ್ತೋಲೆ ಕೊಟ್ಟಿದ್ದೇವೆ. ಇದರ ಬಗ್ಗೆ ಮೂರು

ಬಾರಿ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಇಲ್ಲಿ ಈ ರೀತಿ ಘಟನೆಗಳು ನಡೆಯುವಂಥ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಪ್ರಸ್ತಾಪ ಮಾಡಿ ಮುಖ್ಯಮಂತ್ರಿಗಳಿಂದ ನೇರವಾಗಿ ಅಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರ ಮೂಲಕ ಸುತ್ತೋಲೆಯನ್ನು ಕಳಿಸಿಕೊಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ಮೊದಲು ಸಚಿವರು ಶಿಸ್ತನ್ನು ಕಲಿತುಕೊಳ್ಳಬೇಕು. ಎಂ.ಎಲ್.ಎ.ಗಳು ಅಧ್ಯಕ್ಷತೆ ಇಲ್ಲದಿರುವ ಸಮಾರಂಭಕ್ಕೆ ಯಾವುದೇ ಮಂತ್ರಿಗಳು ಭಾಗವಹಿಸದಿರುವ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಿಮ್ಮ ಬಗ್ಗೆ ನೀವೇ ಶಿಸ್ತನ್ನು ಹೇರಿಕೊಂಡರೆ ಸರಿಯಾಗುತ್ತದೆ.

ಉಪಾಧ್ಯಕ್ಷರು: ಈ ವಿಷಯದ ಬಗ್ಗೆ ಈಗಾಗಲೇ ಎರಡುಮೂರು ಸಲ ಸದನದಲ್ಲಿ ಚರ್ಚೆಯಾಗಿದೆ. ಈಗ ತಾನೇ ಮಾನ್ಯ ಪ್ರಕಾಶ್‌ರವರು ಸರ್ಕಾರದ ಪರವಾಗಿ ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಇನ್ನೊಮ್ಮೆ ಈ ರೀತಿ ಆಗದಂತೆ ಎಚ್ಚರಿಕೆಯನ್ನು ವಹಿಸುವುದಾಗಿ ಹೇಳಿದ್ದಾರೆ. ನಾವೂ ಕೂಡ ಯಾವುದೇ ಶಾಸಕರಿಗೆ ಅಲಕ್ಷ್ಯ ಮಾಡದಂತೆ ಪ್ರತಿಯೊಂದು ಕಾರ್ಯಕ್ರಮದಲ್ಲಿ ಸುತ್ತೋಲೆಯ ಪ್ರಕಾರ ನಡೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿಗೆ ಈ ವಿಚಾರ ಮುಕ್ತಾಯ ಮಾಡೋಣ.

ನಿನ್ನೆ ಶೂನ್ಯ ವೇಳೆಯಲ್ಲಿ ಪ್ರತಾಪಚಂದ್ರ ಶೆಟ್ಟಿಯವರು ಎತ್ತಿದೆ ವಿಚಾರದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿದೆ. ಅದನ್ನು ಸಮಾಜಕಲ್ಯಾಣ ಸಚಿವರು ಮಾಡುತ್ತಾರೆ.

ಸಚಿವರ ಹೇಳಿಕೆ

ವಿಷಯ: ಕುಂದಾಪುರದ ಗಿರಿಜನ ಆಶ್ರಮ ಶಾಲೆಯಲ್ಲಿ ಅತ್ಯಾಚಾರ ನಡೆದಿದೆ ಎಂಬ ಆಪಾದನೆ ಬಗ್ಗೆ

+ ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜಕಲ್ಯಾಣ ಸಚಿವರು): ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ: 19-8-97ರ ತಮ್ಮ ಟಿಪ್ಪಣಿಯಲ್ಲಿ ಗಿರಿಜನ ಆಶ್ರಮ ಶಾಲೆ, ಕುಂದಾಪುರದಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಕುಮಾರಿ ವಿಶಾಲ ಎಂಬುವವರ ಮೇಲೆ ಅದೇ ಸಂಸ್ಥೆಯ ಅಡಿಗೆಯವರಾದ ಶ್ರೀಮತಿ ಕೆ.ಎಂ.ಸುಶೀಲರವರ ಪತಿ ಶ್ರೀ ನಾರಾಯಣ ಎಂಬುವವರು ಎಸಗಿದ್ದರು ಎನ್ನಲಾದ ಅತ್ಯಾಚಾರ ಕುರಿತಂತೆ ದಿನಾಂಕ: 19-8-97ರಂದು ಕುಂದಾಪುರ ತಾಲ್ಲೂಕಿಗೆ ಭೇಟಿ ನೀಡಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಮಾರಿ ವಿಶಾಲ ಹಾಗೂ ಅವರ ತಾಯಿ ಶ್ರೀಮತಿ ರತ್ನ ಇವರನ್ನು ಭೇಟಿ ಮಾಡಿ, ಹಾಗೂ ಸ್ಥಳೀಯ